Sri G. VENKATAI GOWDA.—The Resources and Economy Committee have made certain recommendations in respect of Amrit Mahal Kaval lands. Have the Government considered those recommendations?

Sri R. M. PATIL.—I am not aware of them.

Scarcity and Famine Conditions in the Villages of Nargund and Ron Taluks and in Navalgund and Mundargi Taluks of Dharwar District.

*Q.—107. **Sri A. S. PATIL** (Nargund).—

Will the Government be pleased to state:—

(*a*) whether they are aware of the acute scarcity and famine conditions prevailing in all villages of Nargund and Ron Taluks and nearly 3/4th of villages in Navalgund and Mundargi taluks of Dharwar District;

(*b*) the steps taken by them to relieve the people distressed by scarcity and famine conditions;

(*c*) whether they intend to declare these areas as sarcity areas?

*A.—**Sri R. M. PATIL** (Minister for Home) [on behalf of SRI M. V. KRISHNAPPA (Minister for Revenue)].—

(*a*) and (*b*) Owing to untimely and inadequate rains in Nargund, Ron, Mundargi and Navalgund Taluks, conditions akin to scarcity are prevailing in some of the villages this year. The particulars relating to the number of villages affected and the relief measures undertaken are placed on the Table of the House. [Placed in Legislature library Vide No. 1/L.A. July 1962].

(*c*) The situation at present does not warrant declaration of scarcity in this area.

Sri A. S. PATIL.—What are the conditions required to declare an area a scarcity area?

Sri R. M. PATIL.—Many a time scarcity has been declared in that area. The Hon'ble Member knows very well. But at the same time, I may say that this time they have not reached that staet.

ಶ್ರೀ ಸಿ. ಎಸ್. ಹುಲ್ಕೋಟಿ.—ಆ ಭಾಗದಲ್ಲಿ ಇನ್ನೂ ಕೆಲವು ಹಳ್ಳಿಗಳಲ್ಲಿ ಇದುವರೆಗೂ ಮಳೆ ಆಗಿಲ್ಲ. ಅಲ್ಲಿ ಕೆಲಸವನ್ನು ನಿಲ್ಲಿಸಿದ್ದಾರೆ. ಈಗಲಾದರೂ ಸರ್ಕಾರದವರು ಆ ಪ್ರದೇಶದಲ್ಲಿ ಕಾಮಗಾರಿ ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಪ್ರಯತ್ನಮಾಡುತ್ತಾರೆಯೇ?

ಶ್ರೀ ಆರ್. ಎಂ. ಪಾಟೀಲ್.—ಯಾವ ಯಾವ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆಯೋ ಅಂಥಾ ಪ್ರದೇಶದಲ್ಲಿ ಕಾಮಗಾರಿ ಕೆಲಸ ಪುರುವಾಗಿದೆ. ಅಭಾವ ಪರಿಸ್ಥಿತಿ ಉಂಟಾಗಿರತಕ್ಕ ಪ್ರದೇಶದಲ್ಲಿ ಎಲ್ಲೆಲ್ಲಿ ಇನ್ನೂ ಕೆಲಸ ಪುರುವಾಗಿಲ್ಲವೋ ಅಂಥಾ ಕಡೆ ಕಾಮಗಾರಿ ಕೆಲಸವನ್ನು ಸರ್ಕಾರದವರು ಪುರುಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಭಾವ ಪ್ರದೇಶವೆಂದು ಪರಿಗಣಿಸಬೇಕಾದರೆ ಅಲ್ಲಿ ಇರಬೇಕಾದ ವಾಸ್ತವಾಂಶಗಳೇನು?

Mr. SPEAKER.—I suppose that question has been answered by the Hon'ble Minister.

Sri C. J. MUCKANNAPPA.—He said that the Hon'ble Member knew the conditions of that taluk and that the present situation did not lead to that. I do not know what were those conditions prevailing in that area. I want to know very clearly from the Government what are all the conditions that make Government declare an area a secarcity area.

ಶ್ರೀ ಆರ್. ಎಂ. ಪಾಟೀಲ್.—ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಬೇಕಾದರೆ, ಆ ಪ್ರದೇಶದಲ್ಲಿ ಪೀಕ್ ಬಾರದಿದ್ದರೆ ಅದನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡತ್ತೇವೆ. ಸಾಧಾರಣವಾಗಿ ಮೂರು ಪೀಕ್ ಬೇಳೆಯುತ್ತಾ ಇದ್ದರೆ ಅದರಲ್ಲಿ ಒಂದೆರಡು ಪೀಕ್ ಹಾಳಾದಾಗ ಕಂದಾಯವನ್ನು half suspension ಮಾಡುವ ಪದ್ಧತಿ ಇತ್ತು. ಈ ಸಾರಿ ಅಲ್ಲಿ ಒಂದೆರಡು ಪೀಕ್ ಬಂದಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಮಾನ್ಯ ಮಂತ್ರಿಗಳು ಆ ಪ್ರದೇಶದಲ್ಲಿ ಒಂದೆರಡು ಪೀಕು ಬಂದಿದೆ ಎಂದು ಹೇಳಿದರು. ರೋಣ್ ತಾಲ್ಲೂಕಿನೊಳಗೆ ಈಗ ಮೂರು ವರ್ಷಗಳಿಂದಲೂ ಒಂದೇ ಸಮಾನಾಗಿ ಅಭಾವ ಉಂಟಾಗಿದೆ. ಆ ತಾಲ್ಲೂಕಿನಲ್ಲಿರತಕ್ಕ ನಲವತ್ತು ಹಳ್ಳಿಗಳ ಪೈಕಿ ಇಪ್ಪತ್ತು ಹಳ್ಳಿಗಳೊಳಗೆ ತಹಕೂ ಬಾಗಿದೆ. ಅಲ್ಲಿ ಪೀಕ್ ಬರುವ ಸಂಭವ ಇರುವುದಿಲ್ಲ. ಈ ಕಾರಣಕ್ಕಾಗಿ ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡುವ ಪರಿಸ್ಥಿತಿ ಒದಗಿದೆ. ಹೀಗಿದ್ದರೂ ಸಹ ಆ ಪ್ರದೇಶವನ್ನು ಸ್ಕೇರ್ಸಿಟಿ ಪ್ರದೇಶ ಎಂದು ಡಿಕ್ಲೇರ್ ಮಾಡಲು ಸರ್ಕಾರದವರು ಏತಕ್ಕೆ ಅನುಮಾನ ಮಾಡುತ್ತಾರೆ?

ಶ್ರೀ ಆರ್. ಎಂ. ಪಾಟೀಲ್.—ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡುವುದಕ್ಕೆ ಅನುಮಾನ ಮಾಡುತ್ತಾ ಇಲ್ಲ. ಅಲ್ಲಂದ ಸಾಕಷ್ಟು ರಿಪೋರ್ಟ್ ಬಂದಿಲ್ಲ. ಅದಕ್ಕೊಸ್ಕರ ಅದು ಹಾಗೆಯೇ ಉಳಿದಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಲು

ಇನ್ನೂ ಟೈಮ್ ಬೇಕು ಎಂದು ಅದನ್ನು ಹಾಗೆಯೇ ಬಿಟ್ಟಿದ್ದೀರಾ?

ಶ್ರೀ ಆರ್. ಎಂ. ಪಾಟೀಲ್.—ಟೈಮ್ ನೋಡಿ ಕೊಂಡು ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡುವುದಿಲ್ಲ. ಅವಶ್ಯ ಕಂಡು ಬಂದರೆ ಆ ಪ್ರದೇಶವನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಿದರೆ ಸರ್ಕಾರಕ್ಕೆ ಹೆಚ್ಚಿಗೆ ಜವಾಬ್ದಾರಿ ಬರುತ್ತದೆ ಎಂದು ತಿಳಿದು ಅದನ್ನು ಹಿಂದು ಮುಂದು ಮಾಡುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಸರ್ಕಾರದ ಜವಾಬ್ದಾರಿ ಇದ್ದೇ ಇದೆ. ಸರ್ಕಾರ ಅದನ್ನು ಹೊರಲೇಬೇಕು.

Sri G. DUGGAPPA.—May I know whether the Government have taken any measure to put an end to scarcity conditions on a permanent footing?

ಶ್ರೀ ಆರ್. ಎಂ. ಪಾಟೀಲ್.—ಪರ್ಮನೆಂಟ್ ಸ್ಕೇರ್ಸಿಟಿ ಎಂದು ಅಲ್ಲ. ಸ್ಕೇರ್ಸಿಟಿ ಆಕಸ್ಮಾತ್ತಾಗಿ ಬರುತ್ತದೆ. ಯಾವಾಗ ಮಳೆ ಬರುವುದಿಲ್ಲ ಆಗ ಪರ್ಮನೆಂಟ್ ಸ್ಕೇರ್ಸಿಟಿ ಎಂದು ಯಾವ ದೇಶದಲ್ಲೂ ಇಲ್ಲ.

ಶ್ರೀ ಜಿ. ದುಗ್ಗಪ್ಪ.—ನತತ ಮೂರುವರ್ಷ ಮತ್ತು ಆಗಿಂದಾಗ್ಗೆ ಸ್ಕೇರ್ಸಿಟಿ ಕಂಡುಬಂದ ಭಾಗ ದಲ್ಲಿ ಹೆಚ್ಚು ಅಭಾವ ಪರಿಸ್ಥಿತಿಯಿರುವುದರಿಂದ ಈ ಪರಿಸ್ಥಿತಿಯನ್ನು ನಿವಾರಿಸಲು ಏನಾದರೂ ಕಾರ್ಯ ಕ್ರಮವನ್ನು ಸರ್ಕಾರದವರು ಯೋಚನೆ ಮಾಡಿ ದ್ದಾರೆಯೇ?

ಶ್ರೀ ಆರ್. ಎಂ. ಪಾಟೀಲ್.—ಇಂಥಾ ಸ್ಕೇರ್ಸಿಟಿ ಮೇಲಿಂದ ಮೇಲೆ ಬರುತ್ತದೆ ಎಂದೇ ಅದನ್ನು ನಿವಾರಣೆಮಾಡುವ ನಲುವಾಗಿ ಮಲಪ್ರಭಾ ಯೋಜನೆ ಕಾರ್ಯರೂಪದಲ್ಲಿ ಬಂದಿದೆ ಎಂದು ಹೇಳ ಬಹುದು.

ಶ್ರೀ ಬಿ. ಎಲ್. ಗೌಡ.—ಇದೇ ತರಹ ಅಭಾವ ಪರಿಸ್ಥಿತಿ ಚಳ್ಳಕೆರೆ, ಪೊಳಕಾಲ್ಮೂರು ತಾಲ್ಲೂಕು ಗಳಲ್ಲೂ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr SPEAKER.—That Supplementary is outside the scope of the question.

ಶ್ರೀ ಕೆ. ಲಕ್ಕಪ್ಪ.—ಪ್ರತಿವರ್ಷ ಸ್ಕೇರ್ಸಿಟಿ ಆಗತಕ್ಕ ಪ್ರದೇಶದಲ್ಲಿ ಅದಕ್ಕೆ ಕಾರಣಗಳೇನು ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ?

ಶ್ರೀ ಆರ್. ಎಂ. ಪಾಟೀಲ್.—ಕಾರಣ ಹೇಳಿ ದ್ದಾಗಿದೆ. ಈಗ ಯಾವ ಯಾವ ಕಾರಣಗಳಿವೆಯೋ ಅವೇ ಕಾರಣಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ಪೀಕು, ಎರಡು ಪೀಕು ಅಗಿದೆ ಎಂದು ಹೇಳಿದರಲ್ಲ, ಅಲ್ಲಿ ಒಟ್ಟು ಮಳೆ ಬಿದ್ದದ್ದು ಎಷ್ಟು, ಸ್ವಾಮಿ?

ಶ್ರೀ ಆರ್. ಎಂ. ಪಾಟೀಲ್.—೨೦-೨೫ ಇಂಚು ಮಳೆ ಬಿದ್ದಿದೆ. ಆದರೆ ಕಾಲಕ್ಕೆ ಸರಿಯಾಗಿ ಬಂದಿಲ್ಲ. ಜೂನ್ ತಿಂಗಳಿನಲ್ಲಿ ಮಳೆ ಆಗಬೇಕಾಗಿದ್ದರೆ, ಮೇ ತಿಂಗಳಿನಲ್ಲಿ ಮಳೆ ಆದರೆ ಏನು ಉಪಯೋಗ? ಯಾವಾಗ ಪೀಕಿಗೆ ಮಳೆ ಆಗಬೇಕೋ ಆಗ ಆಗದಿದ್ದರೆ ಸರಿಯಾಗಿ ಪೀಕು ಬಂದಿಲ್ಲ ಎಂದು ಹೇಳಬಹುದು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಯಾವುದೋ ಒಂದು ಯೋಜನೆಯನ್ನು ಕೈಕೊಂಡಿದೆ ಎಂದು ಹೇಳಿ ದಿರಿ. ನಮ್ಮ ನಂಸ್ಥಾನದಲ್ಲಿ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಯಾವಾಗಲೂ ಇರುತ್ತದೆಯಲ್ಲಾ ಅಂಥಾ ಕಡೆಗಳಲ್ಲಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಆರ್. ಎಂ. ಪಾಟೀಲ್.—ಈಗ ಸರ್ಕಾರದವರು ಏನೇನು ಕಾರ್ಯಕ್ರಮವನ್ನು ತೆಗೆದುಕೊಂಡಿ ದ್ದಾರೋ ಅಷ್ಟೇ.

Sri A. S. PATIL.—Is it not a fact that though conditions necessary for declaring a particular area as a scarcity area exist, the Government have not declared so as they have no funds?

Sri R. M. PATIL.—It is not correct.

ಶ್ರೀ ಇ. ನಾರಾಯಣಗೌಡ.—ಸ್ಕೇರ್ಸಿಟಿ ಕಂಡಿಷನ್ ಇರತಕ್ಕ ಪ್ರದೇಶಗಳ ನಿವಾರಣೆಗೆ ಕ್ಷಾಮನಿವಾರಣೆ ಬೋರ್ಡುರಚನೆ ಮಾಡುತ್ತೇವೆ ಎಂದು ಹಿಂದೆ ಶ್ರೀ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿ ದ್ದಾಗ ಆಶ್ವಾಸನೆ ಕೊಟ್ಟಿದ್ದರು. ಈ ಬಗ್ಗೆ ಸರ್ಕಾರ ದವರು ಯೋಚನೆ ಮಾಡಿದ್ದಾರೆಯೇ?

Sri R. M. PATIL.—I also come from that area which is affected by scarcity conditions frequently. But I have my own suspicion or superstition that if we create such a Board we would always be under the mercy of that Board. From that point of view, I oppose it. On the other hand I do urge that there should be a permanent measure to put an end to this scarcity condition.

ಶ್ರೀ ಜಿ. ವೆಂಕಟೇಗೌಡ.—ಅಭಾವ ಪರಿಸ್ಥಿತಿ ಇದೆ ಎಂದು ಪರಿಗಣಿಸಲಿಕ್ಕೆ ನಮ್ಮ ಮೈಸೂರು ರಾಜ್ಯದಲ್ಲಿ ಒಂದೊಂದು ಕಡೆ ಒಂದೊಂದು ಮಾದರಿಯ ನಿಯಮ ಇದೆ. ಒಂದು ರೀತಿಯ ನಿಯಮಗಳಿಲ್ಲದೇ ಇರುವುದರಿಂದ ಕೆಲವು ಭಾಗಗಳಲ್ಲಿ ಕ್ರಮತಪ್ಪಿದು ಕೊಳ್ಳದೇ ಇರುವುದು ನಿಜವಲ್ಲವೇ?

Sri R. M. PATIL.—The Government are always aware of the scarcity conditions obtaining in certain areas. We are receiving monthly and quarterly reports in respect of rains, crops, etc.

Sri G. VENKATAI GOWDA.—May I know whether the Government have taken any steps to secure uniformity in respect of rules and regulations that should govern in giving assistance to scarcity areas?

Sri R. M. PATIL.—The Hon'ble member is asking for uniform rules. But rules have yet to be framed.

Sri N. O. SAMAJI.—(In Marathi)

(No answer)